SRI V.M. KUSNOOR (Minister of State for Co-operation).—

(a) In all 30 primary agricultural credit societies are there in Chamarajanagar Taluk as detailed hereunder :

(1)	Sericulturists-*cum*-Farmers Service Co-operative Societies ...	29
(2)	Service Co-operative Society ...	1

(b) 29 Societies have defaulted in repayments to their financing Banks.

(c) No primary Agricultural, Credit Society is defunct in the Taluk except one society namely ; Amachavadi S.F.S.C.S.

Bulletin about medical attendance to members

SRI K. BHASKAR NAIDU (Bellary).—Mr. Speaker, Sir, yesterday I have received a bulletin in which it is stated as follows :

> "The doctors have also been instructed that they should not supply medicines to the guests of members. The Hon'ble members are requested kindly to get themselves personally examined by the Doctors on special duty before they receive medicines from the Dispensaries"

Does it mean that if I only get examined I will get medicine and if I don't get examined and if I go to a specialist, I don't get any medicine ? Is that the meaning ? What was the Idea of the whole bulletin ?

MR. SPEAKER.—The hon. Member is requested to discuss the matter with me in my chamber after 3 p.m. today.

Elections to T. D. Seats in Bangalore North and South Taluks

ಶ್ರೀ ಎಂ.ವಿ. ರಾಜಶೇಖರನ್ (ಉತ್ತರಹಳ್ಳಿ).—ಬೆಂಗಳೂರು ಜಿಲ್ಲೆಯ ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕಾಗಿತ್ತು. ಮಾನ್ಯ ಕಂದಾಯ ಮಂತ್ರಿಗಳು ಇಲ್ಲಿಯೇ ಇದ್ದಾರೆ ಅದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು.—ಅವರನ್ನು ಕರೆಸಿ ಮಾತನಾಡಬೇಕೆಂದು ಅಪೇಕ್ಷೆ ಪಟ್ಟೆ. But I could not contact him.

SRI M. V. RAJASHEKARAN.—Elected members have been denied opportunity.

ಶ್ರೀ ಬಸವಲಿಂಗಪ್ಪ—ಸರ್ಕಾರದ ನಿಲುವು ಸ್ಪಷ್ಟವಾಗಿದೆ. ಆದರೆ ತಮಗೆ ಏನು ಅನುಮಾನವೋ ಗೊತ್ತಾಗುತ್ತಿಲ್ಲ.

ಶ್ರೀ ಎಂ.ವಿ. ರಾಜಶೇಖರನ್.—ತಾವು ಹೇಳಿಕೆಯನ್ನು ಕೊಡುವುದರಲ್ಲಿ ಇಷ್ಟು ನಿಧಾನ ಮಾಡುವು ದಾದರೆ ನಾವು ಹಿಂದಕ್ಕೆ ಹೋಗಬೇಕಾಗುತ್ತದೆ. ತಾವು ಯಾವ ಭರವಸೆಯನ್ನು ಕೊಟ್ಟಿದ್ದೀರೋ ಅದರ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಪಿ. ರಾಮದೇವ್.—ನನಗೂ ಸ್ವಲ್ಪ ಗ್ರಾಮಾಂತರ ಪ್ರದೇಶ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭೆಯಲ್ಲಿ ಹೇಳಿದಂತೆ ನಾವು ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿದ್ದೇವೆ. ಮತ್ತೆ ಕಾನೂನು ತಜ್ಞರನ್ನೂ ಕರೆಸಿ ನಾವುಗಳೆಲ್ಲರೂ ಗ್ರಾಮಾಂತರ ಅಭಿವೃದ್ಧಿ ಖಾತೆಯ ಮಂತ್ರಿಗಳ ಕೊಠಡಿಯಲ್ಲಿ ಸಮಾಲೋಚನೆ ಮಾಡಿದ್ದೇವೆ. ನಾವೆಲ್ಲ ಅರ್ಥ ಮಾಡಿ ಕೊಂಡಿದ್ದೇವೆ. ಅದೇ ರೀತಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆಯೂ ಯೋಚನೆ ಮಾಡಿದ್ದೇವೆ. ಅಸೆಂಬ್ಲಿ ಮುಗಿಯುವುದರೊಳಗೆ ಯೋಚನೆ ಮಾಡಿ ಮುಗಿಸುತ್ತೇವೆ.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಮಂತ್ರಿಗಳು ಅಸೆಂಬ್ಲಿ ಮುಗಿಯುವುದರೊಳಗಾಗಿ ಎಂಬುದಾಗಿ ಹೇಳುತ್ತಿದ್ದಾರೆ. ಇದರಿಂದ ಹೀಗೆ ಮುಂದೂಡಿಕೊಂಡು ಹೋಗಿ ಕೊನೆಗೆ ಬದಲಾವಣೆ ಮಾಡಬೇಕೆಂದು ಯೋಚನೆ ಮಾಡಿದ್ದಾರೆಂದು ಅರ್ಥವಾಗುತ್ತದೆ. ತಾವು ನಮಗೆ ಭರವಸೆ ಕೊಟ್ಟಿದ್ದೀರಿ. ಈ ಎರಡು ತಾಲ್ಲೂಕುಗಳ ಬಗ್ಗೆ ತಾವು ಭರವಸೆ ಕೊಟ್ಟಿದ್ದೀರಿ. ಅದನ್ನು ಈಡೇರಿಸುತ್ತೀರೋ ಅಥವಾ ಹಿಂದಕ್ಕೆ ಹೋಗುತ್ತೀರೋ ಎನ್ನುವುದನ್ನು ತಿಳಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಏಕೆ ಅವರ ಮೇಲೆ ನಿಮಗೆ ನಂಬಿಕೆ ಇಲ್ಲವೇ ?

ಶ್ರೀ ಎಂ. ವಿ. ರಾಜಶೇಖರನ್.—ತಾವು ಭರವಸೆ ನೀಡಿದ್ದೀರಿ. ಆ ಭರವಸೆಯನ್ನು ಮಾನ್ಯ ಮಂತ್ರಿಗಳು ಈಡೇರಿಸುವಂತೆ ಕಾಣುತ್ತಿಲ್ಲ.

ಅಧ್ಯಕ್ಷರು.—ಏನು ಮಾತನಾಡಿದ್ದಾರೆಂಬುದರ ಬಗೆ ತಾವು ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿ. ಆಪರು ಬಂದ ಮೇಲೆ ವಿಚಾರ ಮಾಡಿಕೊಳ್ಳಿ. ನಂತರ ಮುಂದೆ ಮಾತ ನಾಡೋಣ.

ಶ್ರೀ ಎಂ. ವಿ. ರಾಜಶೇಖರನ್.—ಎರಡು ತಾಲ್ಲೂಕುಗಳಿಗೂ ತೊಂದರೆಯಾಗದಂತೆ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆಂದು ಹೇಳಿದರು. ನಾವು ಕಳೆದ ಎರಡು ಮೂರು ದಿವಸಗಳಿಂದ ಕಾಯುತ್ತಿದ್ದೇವೆ. ಅವರು ಫೋಸ್ಟ್ ಪೂನ್ ಮಾಡಿಕೊಂಡು ಹೋಗುತ್ತಿದ್ದಾರೆ. ಆದಷ್ಟು ಜಾಗ್ರತೆ ಈ ವಿಚಾರವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಒಂದು ಸಭೆಯನ್ನೇ ಕರೆದಿದ್ದವು. ಕಾನೂನು ತಜ್ಞರ ಜೊತೆಯಲಿ ಮಾತನಾಡಿದ್ದೇವೆ. ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ಆಲೋಚನೆ ಮಾಡಿ ತೀರ್ಮಾನ ಮಾಡಿದ್ದೇವೆ.

ಶ್ರೀ ಪಿ. ರಾಮದೇವ್.—ರೂರಲ್ ಏರಿಯಾಗಳು ಕೆಲವು ನನ್ನ ಕ್ಷೇತ್ರಕ್ಕೆ ಸೇರಿರುತ್ತವೆ. ನನ್ನನ್ನು ಸಿಟಿ ಲೆಜಿಸ್ಲೇಟರ್ ಎಂಬುದಾಗಿ ತಿಳಿದುಕೊಳ್ಳದೆ ಈ ವಿಚಾರವನ್ನು ವಿಚಾರ ಮಾಡಿ ತೀರ್ಮಾನ ಕೈಕೊಳ್ಳು ವಾಗ ನನ್ನನ್ನೂ ಕನ್‌ಸಲ್ಟ್ ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಕಾನೂನು ಇಲಾಖೆಯವರ ಜೊತೆಯಲ್ಲಿ ಹಾಗೂ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿದ್ದೇನೆಂದು ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಿದ್ದಾರೆ.

CALLING ATTENTION TO MATTERS OF URGENN PUBLIC IMPOTANCE :

(i) *re : havoc of Wild Elephants in Belthangadi*

ಶ್ರೀ ಕೆ. ರಾಮಭಟ್ (ಪುತ್ತೂರು).—ದಕ್ಷಿಣ ಕನ್ನಡಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಾಡಾನೆಗಳಿಂದ ಉಂಟಾದ ಹಾನಿಗೆ ಸಂಬಂಧಿಸಿದಂತೆ ಮಾನ್ಯ ಆಹಾರ ಹಾಗೂ ಅರಣ್ಯ ಇಲಾಖೆಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.